ಅನುವಾದಿಸುತ್ತಿದ್ದ ಸಾಲಿಯವರು, ಅವರಂತೆ ತಾನೂ ಬರೆಯಬೇಕು, ಅಂದುಕೊಂಡು ಡೈರಿ ಬರೆಯಲು ಆರಂಭಿಸಿರಬಹುದು. ಅಂದರೆ 1933ರಿಂದ ಬಹುತೇಕ ತಮ್ಮ ಕೊನೆಯ ದಿನಗಳವರೆಗೂ ಸಾಲಿ ಅಜ್ಜ ಬರೆದ ಡೈರಿಗಳು ಇದ್ದುವು ಎಂದೇ ನನ್ನ ಗ್ರಹಿಕೆ. ಈಗಿನ ಇಷ್ಟು ದಿನಗಳ ವಿವರಗಳನ್ನು ಓದುತ್ತ, ಒಂದು ಪವಿತ್ರ ಜೀವವನ್ನು ನಮ್ಮ ಸಮಾಜ ಎಷ್ಟು ನಿರ್ಲಕ್ಷಿಸಿತು, ಕಷ್ಟಕ್ಕೀಡು ಮಾಡಿತು ಎಂಬುದನ್ನು ನೆನೆದು, ಕಣ್ಣು ಹನಿದುಂಬುತ್ತವೆ.

1978ರ ಅಕ್ಟೋಬರ್ 31ರಂದು ಸಾಲಿಯವರು ಶ್ರೀಹರಿಯಲ್ಲಿ ಲೀನರಾದರು. (ಜನನ: 1888 ಅಕ್ಟೋಬರ್ 10.) ನಾನು 1980ರ ಅಕ್ಟೋಬರ್‌ದಲ್ಲಿ ಪರಮೇಶ್ವರ ಹೆಗಡೆ ಅವರೊಂದಿಗೆ 'ಸಾಲಿ ರಾಮಚಂದ್ರರಾಯ' ಸ್ಮರಣಗ್ರಂಥ ಸಂಪಾದಿಸಿ ಪ್ರಕಟಿಸಿದೆ. ಆ ನಂತರ ಕನ್ನಡ ಪುಸ್ತಕ ಪ್ರಾಧಿಕಾರಕ್ಕಾಗಿ ಸಾಲಿಯವರ ಸಮಗ್ರ ಕಾವ್ಯವನ್ನು ಸಂಕಲಿಸಿದೆ (1996). ಆ ಹೊತ್ತಿನಲ್ಲಿ ತಮಗೆ ಸಿಕ್ಕ ಸಾಲಿ ಅವರ ಹಸ್ತಪ್ರತಿಗಳನ್ನು ಸುಬ್ಬಕ್ಕ ಮತ್ತು ಶೀನಣ್ಣ ನನಗೆ ಕೊಟ್ಟದ್ದರು. ಅಲ್ಲಿದ್ದ ಕೆಲವು ವಿವರಗಳನ್ನು ಪರಿಶೀಲಿಸುತ್ತಿದ್ದೆ; ಸಾಲಿಯವರು ಮೊದಲಿನಿಂದಲೂ ಡೈರಿ ಬರೆಯುವ ಅಭ್ಯಾಸ ಇಟ್ಟುಕೊಂಡಿದ್ದರು, ಮತ್ತು ಹಾಗೆ ಬರೆಯುತ್ತ, ನಡುನಡುವೆ ತಕ್ಷಣ ಕವಿತೆಗಳನ್ನು ರಚಿಸುತ್ತಿದ್ದರು ಎಂದು ಅನಿಸಿತ್ತು. ಅದನ್ನು ಶೀನಣ್ಣನಿಗೆ ತಿಳಿಸಿದೆ, 'ನನಗೆ ಅಜ್ಜನ ಡೈರಿಗಳನ್ನು ತೋರಿಸಿರಿ, ಅಲ್ಲಿ ಮಧ್ಯೆಮಧ್ಯೆ ಬಂದಿರುವ ಕವಿತೆಗಳನ್ನು ಆಯ್ದು, ಪ್ರತಿ ಮಾಡಿಕೊಳ್ಳುತ್ತೇನೆ, ಅವೂ ಈ 'ಸಮಗ್ರ'ದಲ್ಲಿ ಸೇರಲಿ' ಎಂದೆ. ನನ್ನನ್ನು ಬಹಳ ಪ್ರೀತಿಸುತ್ತಿದ್ದ, ನಂಬುತ್ತಿದ್ದ ಶೀನಣ್ಣ, 'ನಾನೇ ಆ ಎಲ್ಲ ಡೈರಿಗಳನ್ನು ನೋಡುತ್ತೇನೆ, ಅಂಥ ಪದ್ಯಗಳು ಸಿಕ್ಕರೆ ಕೊಡುತ್ತೇನೆ' ಎಂದರು. ಆ ಕುರಿತು ಆಗಾಗ ವಿಚಾರಿಸುತ್ತಲೇ ಇದ್ದೆ. ಆದರೆ 'ಅಜ್ಜನ ಡೈರಿಗಳನ್ನು ಒಂದು ಪೆಟ್ಟಿಗೆಯಲ್ಲಿ ಕಟ್ಟಿ ಇಟ್ಟಿದ್ದೇನೆ. ಅವುಗಳಲ್ಲಿ ಹುಡುಕಿದೆ, ಅಲ್ಲಿ ಅಜ್ಜ ಬರೆದ ಪದ್ಯಗಳು ಇಲ್ಲ' ಎಂದು ಹೇಳಿದರು. ಯಾವುದೋ ವಿಶಿಷ್ಟ ಕಾರಣದಿಂದಾಗಿ, ಶೀನಣ್ಣ ಡೈರಿಗಳನ್ನು ನನಗೆ ತೋರಿಸುತ್ತಿಲ್ಲ, ಮತ್ತು ಅಲ್ಲಿದ್ದ ಪದ್ಯಗಳ ಸಲುವಾಗಿ ನನಗೆ ತೋರಿಸಿದರೆ, ನಾನು ಅಜ್ಜನ ಡೈರಿ ಓದಬಹುದಾಗಿದೆ, ಆಗ ಶೀನಣ್ಣನಿಗೆ ಇಷ್ಟವಾಗದಿದ್ದ ಅಥವಾ ಅವರ ದೃಷ್ಟಿಯಲ್ಲಿ 'ಬೇಡವಾಗಿದ್ದುವು' ಎನಿಸಿದ್ದ ಅಂಶಗಳನ್ನು ನಾನು ಗಮನಿಸಬಹುದು, ಅದು ತಮಗೆ ಇಷ್ಟವಿಲ್ಲ, ಎಂದು ಭಾವಿಸಿದ್ದರು ಅನಿಸುತ್ತದೆ.

ಅಂತೂ ಡೈರಿಗಳು ಇದ್ದುವು. ಅವು ಪ್ರಕಟವಾಗಿದ್ದರೆ, ಆ ಕಾಲದ ಸಮಗ್ರ ಸಾಮಾಜಿಕ, ಸಾಹಿತ್ಯಿಕ ಜೀವನದ ಒಂದು ಪರಿಪ್ರೇಕ್ಷ್ಯ ಮೂಡಬಹುದಾಗಿತ್ತು; ಅವುಗಳ ಪ್ರಕಟಣೆಯಿಂದ ಸಾಲಿಯವರಿಗಾಗಲಿ, ಅವರ ಕುಟುಂಬದವರಿಗಾಗಲಿ, ಬಹುಶಃ, ಯಾರಿಗೂ ಎಂದೂ ಯಾವ ತೊಂದರೆಯೂ ಆಗುತ್ತಿರಲಿಲ್ಲ; ಬದಲಾಗಿ ಸಾಲಿ ಅಜ್ಜನ ಪರಿಶುದ್ಧ, ಪಾವನ ವ್ಯಕ್ತಿತ್ವದ ಮೇಲಿರುವ ದಿವ್ಯ ಪ್ರಭೆ ಇನ್ನಷ್ಟು ದಟ್ಟವಾಗುತ್ತಿತ್ತು. ಆ ಡೈರಿ ಪುಸ್ತಕಗಳು ಯಾಕೆ ಕಣ್ಮರೆಯಾದುವು, ತಿಳಿಯದಾಗಿದೆ.

ನನಗೆ ಸಿಕ್ಕಿರುವ ಡೈರಿಯಲ್ಲಿ ಮಧ್ಯೆ ಮಧ್ಯೆ ಸ್ಫುರಿಸಿದ ಚಿಕ್ಕ ದೊಡ್ಡ 15 ಕವಿತೆಗಳಿವೆ. ಕೊನೆಯ ಕಿರುಪದ್ಯದ ಕೊನೆಯ ಸಾಲಿನ ಕೊನೆಯ ಭಾಗವು, ಬಹುಶಃ ನೀರು ಬಿದ್ದು, ಅಳಿಸಿಹೋಗಿದೆ. ಅದಕ್ಕೆ ಲಯ, ಪ್ರಾಸ ಮತ್ತು 'ಸಾರಾ ಚಿಂತನಕ್ಕೆ ಹೊಂದುವ ಜೀವನವು' ಎಂಬ ಒಂದು ಪದವನ್ನು ನಾನು ಸೇರಿಸಿದ್ದೇನೆ.

ನಾನು ಡೈರಿಯನ್ನು ವಿವರಿಸುವುದಿಲ್ಲ, ವಿಶ್ಲೇಷಿಸುವುದಿಲ್ಲ. ಅದನ್ನು ಆಸಕ್ತರಿಗೆ ಬಿಡುತ್ತೇನೆ. ಈಗಲೂ ಸಾಲಿ ರಾಮಚಂದ್ರರಾಯರಂಥ ಜೀವಗಳು ನಮ್ಮ ಸಮಾಜಕ್ಕೆ ಎಷ್ಟು ಮುಖ್ಯ ಎಂಬುದನ್ನು ನಮ್ಮ ಮಂದಿ ಅರ್ಥ ಮಾಡಿಕೊಳ್ಳಲಿ, ಅಷ್ಟೆ.

|| ಶ್ರೀಃ ||

**ವಿಶ್ವಮಂಗಲಮಾಂಗಲ್ಯೇ ಶಶ್ವದಾಮೋದದಾಯಿನಿ|**
**ಶ್ರೀವಿಷ್ಣೋಃ ಪಾದಪದ್ಮೇಸ್ತು ರತಿರ್ಮೇ ಶ್ರೀನಿಕೇತನೇ||**

**21-10-41 ರಾತ್ರಿ 8.40**

18ನೆಯ ತಾರೀಖಿನಿಂದ ಹಲ್ಲುನೋವು, ಅದರಿಂದ ಜ್ವರ, ತಲೆನೋವು. ಇಂದು ಸ್ವಲ್ಪ ಗುಣ, ಸಂಜೆಯಿಂದ. ಬಲಿಪ್ರತಿಪತ್: ಮನೆಗೆ ಚೌಕಟ್ಟುಗಳನ್ನು (2) ಇಟ್ಟಿತು.

ದುಃಸ್ವಪ್ನಕ್ಕೆ ಬೆಸತ್ತೆನು. ಶ್ರೀಹರಿ, ಕರುಣೆದೋರು. ದುಃಸ್ವಪ್ನಗಳಿಂದ ನನ್ನನ್ನು ಮುಕ್ತಗೊಳಿಸು.